# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 05/03/2020

## ರಾತ್ರಿಯವರೆಗೆ ಸದನ, ಪ್ರಶ್ನೋತ್ತರ

5/3/20

ಸಂ.ಕ.ಸಮಾಚಾರ ಬೆಂಗಳೂರು

ಬುಧವಾರ ವಿಧಾನಸಭೆಯಲ್ಲಿ ಸಂವಿಧಾನ ಚರ್ಚೆ ರಾತ್ರಿ 8.15ರವರೆಗೆ ನಡೆಯಿತು. ನಂತರ ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳಲಾಯಿತು. ಮೊದಲ ಪ್ರಶ್ನೆ ಡಿ.ವೇದವ್ಯಾಸ ಕಾಮತ್ ಅವರದ್ದಾಗಿತ್ತು.

ಮಂಗಳೂರು ಆರ್‌ಟಿಒ ಕಚೇರಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಶಾಸಕ ವೇದವ್ಯಾಸ ಕಾಮತ್ ತಮ್ಮ ಪ್ರಶ್ನೆಯ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತಂದರು. ಕೆಲವೇ ದಿನಗಳಲ್ಲಿ ಭರ್ತಿ ಮಾಡುವುದಾಗಿ ಉಪಮುಖ್ಯಮಂತ್ರಿಗಳೂ ಆದ ಲಕ್ಷ್ಮಣ ಸವದಿ ಉತ್ತರಿಸಿದರು. ಇಡೀ ರಾಜ್ಯದ ಎಲ್ಲ ಖಾಲಿ ಹುದ್ದೆಗಳನ್ನು ಶೀಘ್ರ ತುಂಬುವುದಾಗಿ ತಿಳಿಸಿದರು.

ಸಾರಿಗೆ ನಿಗಮದ ಸಿಬ್ಬಂದಿ ಕುರಿತು ಶಾಸಕ ಹರತಾಳು ಹಾಲಪ್ಪ ಕೇಳಿದ ಪ್ರಶ್ನೆಗೆ, ನಿಗಮಗಳ ನೌಕರರ ವೇತನ ವ್ಯತ್ಯಾಸ ಸರಿಪಡಿಸಲಾಗುವುದು ಎಂದು ಉಪಮುಖ್ಯಮಂತ್ರಿ ಸವದಿ ತಿಳಿಸಿದರು. ನೌಕರಿ ಕಳೆದುಕೊಳ್ಳುವ ಆತಂಕ ನೌಕರರಿಗಿದೆ. ಇದು ಅನಗತ್ಯ. ಸೇವಾ ಭದ್ರತೆಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇವರನ್ನು ಸರ್ಕಾರಿ ನೌಕರರನ್ನಾಗಿ ಮಾಡುವ ಕುರಿತು ಸಮಿತಿ ಪರಿಶೀಲನೆ ನಡೆಸಿದೆ ಎಂದರು. ಒಂದು ನಿಗಮದಿಂದ ಇನ್ನೊಂದಕ್ಕೆ ವರ್ಗಾವಣೆ ಮಾಡುವುದಕ್ಕೆ ತೊಂದರೆ ಇದೆ ಎಂದರು.